ಚಿಂತಾಮಣಿ ಕೊಡ್ಲೆಕೆರೆ

# ಬುದ್ಧಿಜೀವಿ ದೇವರಿಗೇ ಪ್ರೀತಿ

"ಓಹ್, ನೀವೊಬ್ಬ ಬುದ್ಧಿಜೀವಿ" – ಉದ್ಗರಿಸಿದರು ಆ ಗೆಳೆಯರು. ತಲೆ ಎತ್ತಿ ನೋಡಿದೆ. ಆ ಶಬ್ದ ಪ್ರಯೋಗಕ್ಕೂ, ಆ ಕಾಕುವಿಗೂ ತಾಳೆಯಾಗುತ್ತಿರಲಿಲ್ಲ. ಆದರೂ ನಗುತ್ತಲೇ ಕೇಳಿದೆ:

"ಇದೊಂದು ಮೆಚ್ಚುಗೆಯ ಮಾತೆಂದು ತಿಳಿಯಲೇ?"

ನನ್ನ ಬಗೆಗೆ ಅವರಿಗೆ ಅಪಾರ ಅನುಕಂಪ ಹುಟ್ಟಿತು. ಹೇಳಿದರು:

"ಸ್ವಾಮೀ, ಅದೊಂದು ಅಪಹಾಸ್ಯದ ಪದ. ನೀವು ಪತ್ರಿಕೆಗಳನ್ನು ಓದುವುದಿಲ್ಲ ಎಂದು ಕಾಣುತ್ತದೆ. ಅಲ್ಲೆಲ್ಲ ಈ ಪದ ಹೇಗೆ ಬಳಕೆಯಾಗುತ್ತದೆ ಎಂಬುದನ್ನು ಗಮನಿಸಿ."

"ಪತ್ರಿಕೆಗಳನ್ನು ಓದದೆ ಇರಲು ಉಂಟೆ? ಅದರಿಂದಾಗಿಯೇ ಗೊಂದಲ. ಬುದ್ಧಿಜೀವಿ ಧನಾರ್ಥಕ ಪದ ಅಲ್ಲ ಅನ್ನುತ್ತೀರಾ?" ವಿನಯದಿಂದ ಕೇಳಿದೆ. ಗೀತೆಯಲ್ಲಿ ಹೇಳಿದ 'ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ' ಎಂಬುದನ್ನು ಅರ್ಧ ಗಂಟೆ ಹಿಂದೆ ಅಷ್ಟೇ ಓದಿದ್ದೆ. ನನ್ನ ವಿನಮ್ರತೆಯಿಂದ ಗೆಳೆಯರು ಸಂತುಷ್ಟರಾದರು. "ನೀವು ಬುದ್ಧಿಜೀವಿ ಅಲ್ಲ ಬಿಡಿ" ಎಂದು ಅವರು ನನ್ನನ್ನು ಸಮಾಧಾನ ಪಡಿಸಿದರು. ('ಅಯ್ಯೋ ದೇವರೇ, ಹಾಗೆಂದರೆ ನನಗೆ ಬುದ್ಧಿ ಇಲ್ಲ ಎಂದಾಯಿತಲ್ಲವೇ?') ಈ ಪಾಟಿ ಮುಗ್ಧತೆ, ವಿನಯ ಬುದ್ಧಿಜೀವಿಯ ಲಕ್ಷಣವೇ ಅಲ್ಲವಂತೆ. ನನಗೆ ಗೊಂದಲ ಹೆಚ್ಚತೊಡಗಿತು. ಪರವಾಗಿಲ್ಲ, ಪರಿಪ್ರಶ್ನೆಯ ಮೂಲಕ ಸಂದೇಹ ದೂರ ಮಾಡಿಕೊಂಡರಾಯಿತು.

"ಕೆಲವೇ ನಿಮಿಷಗಳ ಹಿಂದೆ ನನ್ನನ್ನು ಬುದ್ಧಿಜೀವಿ ಎಂದಿರಿ, ಈಗ ಬುದ್ಧಿಜೀವಿ ಅಲ್ಲ ಎನ್ನುವಿರಿ, ಅದೊಂದು ಬಗೆಯ ಸಾಪೇಕ್ಷ ಪದವೇ?"

"ನೋಡಿ, ನೋಡಿ – ನಿಮಗೆ ಸ್ವಲ್ಪ ಬುದ್ಧಿಜೀವಿತ್ವದ ಗುಣ ಇದೆ. ಕೊಂಚ ನಿಗ್ರಹಿಸಿ ಅದನ್ನು. ನಮ್ಮ ಮುಂದಿರುವವರು ಅಧಿಕ ಶಾಣ್ಯಾತನದ ಮಾತುಗಳನ್ನಾಡುತ್ತಿದ್ದರೆ, 'ಊರಿಗೊಂದು ದಾರಿಯಾದರೆ ಪೋರನಿಗೊಂದು ದಾರಿ' ಎಂಬಂತೆ ಮಾತನಾಡುತ್ತಿದ್ದರೆ ಆಗ ಇವನೊಬ್ಬ ಬುದ್ಧಿಜೀವಿ ಎಂದು ತೀರ್ಮಾನಕ್ಕೆ ಬರುತ್ತೇವೆ. ಈ ವ್ಯಂಗ್ಯಾರ್ಥದಲ್ಲಿ ಆ ಪದ ಬಳಕೆಯಲ್ಲಿದೆ."

"ಈಗ ನನಗೆ ಅರ್ಥವಾಯಿತು. ಆದರೆ ಅಧಿಕ ಶಾಣ್ಯಾರನ್ನು ಹಾಗೆಂದೇ ಕರೆಯಬಹುದಲ್ಲ! ಬುದ್ಧಿ ತುಂಬ ಅಮೂಲ್ಯ ಸಂಗತಿ ಅಲ್ಲವೇ? ಬುದ್ಧಿಜೀವಿ ಎಂದರೆ ಎಂಥ ದೊಡ್ಡ ಸ್ಥಾನ! ಆ ಪದ ಇಷ್ಟು ನೀಚಾರ್ಥಕ್ಕೆ ಹೇಗೆ ಸಂದಿತೋ!"

"ಹೇಗೆ ಸಂದಿತು ಎಂದರೆ ಅಂಥವರ ದುರಹಂಕಾರದಿಂದ. ನಾವೆಲ್ಲಾ ಒಂದು ರೀತಿಯಲ್ಲಿ